ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1455
ಸದಸ್ಯರ ಹೆಸರು	:	ಶ್ರೀ ಎಂ.ಸಿ. ವೇಣುಗೋಪಾಲ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	19-03-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ</th><th>ಕೇಳಿರುವ ಪ್ರಶ್ನೆ</th><th>ನೀಡಲಾದ ಉತ್ತರ / ಮಾಹಿತಿ</th></tr>
<tr><td>ಅ)</td><td>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಾರಂಭದಿಂದ ಇಲ್ಲಿಯವರೆಗೂ, ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಿದ್ದರೆ ವಿವರವನ್ನು ನೀಡುವುದು;</td><td>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೂ, 1999 ರಿಂದ 2014 ರ ಅವಧಿಯಲ್ಲಿ ಪ್ರಾಧಿಕಾರದ ಆರ್ಥಿಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಣವನ್ನು ವಿವಿಧ ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ ವಿವರಗಳು – ಮಹಾಲೇಖಪಾಲರು, ಕರ್ನಾಟಕರವರ ಮಾರ್ಚ್-2015ಕ್ಕೆ ಕೊನೆಗೊಂಡ ವರ್ಷ 2016ನೆ ವರ್ಷದ ವರದಿ ಸಂಖ್ಯೆ-1ರ ಕಂಡಿಕೆ 4.3.5.2(ಅ) ಕೋಷ್ಟಕ 4.5 ರ ವಿವರಗಳಂತೆ: (ರೂ.ಕೋಟಿಗಳಲ್ಲಿ)
<table>
<tr><th>ಕ್ರಮ ಸಂಖ್ಯೆ</th><th>ಹಣಕಾಸು ಸದಸ್ಯರ ಹೆಸರು</th><th>ಮ್ಯೂಚುಯಲ್ ಫಂಡ್‌ಗಳಲ್ಲಿನ ಒಟ್ಟಾರೆ ಹೂಡಿಕೆಗಳು</th><th>ವಾಪಸ್ಸ್ ಬಂದಿರುವ ಮೊತ್ತ</th><th>ಹೂಡಿಕೆಯಿಂದ ಬಂದ ಲಾಭ / ನಷ್ಟ</th></tr>
<tr><td>1</td><td>ಶ್ರೀ ಸಂದೀಪ್ ದಾಶ್</td><td>2202.90</td><td>2241.51</td><td>(+) 38.61</td></tr>
<tr><td>2</td><td>ಶ್ರೀ ಎಮ್.ಎನ್.ಶೇಷಪ್ಪ</td><td>567.55</td><td>530.79</td><td>(–) 36.76</td></tr>
<tr><td>3</td><td>ಶ್ರೀ ಬಿ.ಗಂಗಣ್ಣ</td><td>133.00</td><td>132.75</td><td>(–) 0.25</td></tr>
<tr><td></td><td>ಒಟ್ಟು =</td><td>2903.45</td><td>2905.05</td><td>1.60</td></tr>
</table>
</td></tr>
<tr><td>ಆ)</td><td>ಪ್ರಸ್ತುತ ಜಾರಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ನಿಷೇಧವಿದ್ದರೂ, ಪ್ರಾಧಿಕಾರದ ಅಧಿಕಾರಿಗಳು ಕಾನೂನು ಬಾಹಿರವಾಗಿ ಹೂಡಿಕೆ ಮಾಡಿದ್ದರಿಂದ, ಸರ್ಕಾರಕ್ಕಾದ ಒಟ್ಟು ನಷ್ಟವೆಷ್ಟು;</td><td>ಮೂವರು ಹಣಕಾಸು ಸದಸ್ಯರ ಅಧಿಕಾರಾವಧಿಯಲ್ಲಿ ಮ್ಯೂಚುಯಲ್ ಫಂಡ್‌ಗಳಲ್ಲಿನ ಅನಧಿಕೃತ ಹೂಡಿಕೆಗಳಿಂದ ಜುಲೈ 2015 ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆದ ನಷ್ಟದ ವಿವರಗಳು – ಮಹಾಲೇಖಪಾಲರು, ಕರ್ನಾಟಕರವರ ಮಾರ್ಚ್-2015ಕ್ಕೆ ಕೊನೆಗೊಂಡ ವರ್ಷ 2016ನೆ ವರ್ಷದ ವರದಿ ಸಂಖ್ಯೆ-1ರ ಕಂಡಿಕೆ 4.3.5.2(ಇ) ಕೋಷ್ಟಕ 4.6. ಆದರೆ ಮ್ಯೂಚ್ಯುಯಲ್ ಫಂಡ್‌ನಲ್ಲಿ ತೊಡಗಿಸಿದ ಹಣವನ್ನು ಬೇರೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿ ಮಾಡಿದ್ದಲ್ಲಿ ಅದರಿಂದ ಗಳಿಸಬಹುದಾದ ಬಡ್ಡಿ ಮೊತ್ತವನ್ನು ಜುಲೈ-2015 ವರೆಗೆ ಲೆಕ್ಕಹಾಕಿದರೆ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ನಷ್ಟವಾಗಿರುತ್ತದೆ (ರೂ.ಕೋಟಿಗಳಲ್ಲಿ)
<table>
<tr><th>ಕ್ರಮ ಸಂಖ್ಯೆ</th><th>ಹಣಕಾಸು ಸದಸ್ಯರ ಹೆಸರು</th><th>ಕಾರ್ಯ ನಿರ್ವಹಿಸಿದ ಅವಧಿ</th><th>ಅವರ ಅಧಿಕಾರಾವಧಿಯ ಕೊನೆಯಲ್ಲಿ ಆದ ನಷ್ಟ</th><th>ಜುಲೈ 2015 ರಲ್ಲಿದ್ದರಂತೆ ಸಂಚಿತ ನಷ್ಟ</th></tr>
<tr><td>1</td><td>ಶ್ರೀ ಸಂದೀಪ್ ದಾಶ್</td><td>ದಿ: 12-5-97 ರಿಂದ 10-5-2005 ರವರೆಗೆ</td><td>15.55</td><td>36.38</td></tr>
</table>
</td></tr>
</table>

2	ಶ್ರೀ ಎಮ್.ಎನ್.ಶೇಷಪ್ಪ	ದಿ: 12-5-2005 ರಿಂದ 30-6-2008 ರವರೆಗೆ	72.43	142.30
3	ರೂ. 3.08 ಕೋಟಿಯನ್ನು ಶ್ರೀ.ಎಮ್.ಎನ್.ಶೇಷಪ್ಪನವರು ಮುಖ್ಯ ಚಾಲ್ತಿ ಖಾತೆಗೆ ಹಿಂತಿರುಗಿಸಲಿಲ್ಲವಾದ್ದರಿಂದ ಬಡ್ಡಿ ನಷ್ಟ		0	0.91
4	ಶ್ರೀ ಬಿ.ಗಂಗಣ್ಣ	ದಿ: 8-12-2011 ರಿಂದ 30-6-2014 ರವರೆಗೆ	10.47	13.73
5	ರೂ.5.21 ಕೋಟಿಯನ್ನು ಶ್ರೀ.ಬಿ.ಗಂಗಣ್ಣರವರು ಮುಖ್ಯ ಚಾಲ್ತಿ ಖಾತೆಗೆ ಹಿಂತಿರುಗಿಸಲಿಲ್ಲವಾದ್ದರಿಂದ ಬಡ್ಡಿ ನಷ್ಟ		0	0.55
	ಒಟ್ಟು =		**98.45**	**192.41**
	ಬೇರೆ ಸಂಸ್ಥೆಗಳಾದ ಕಾಫಿ ಬೋರ್ಡ್ ಕರ್ನಾಟಕ, ಬೆಂಗಳೂರು ಮೆಟ್ರೋ ಮತ್ತು ಬಿಸಿಎಂ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಸೊಸೈಟಿಗಳಿಗೆ ಅನಧಿಕೃತವಾಗಿ ವರ್ಗಾಯಿಸಿರುವ ಮೊತ್ತ (ಜುಲೈ 2015ರವರೆಗೆ ಬಡ್ಡಿ ಸೇರಿ)			13.46
	ಪ್ರಾಧಿಕಾರಕ್ಕೆ ಆದ ಒಟ್ಟು ಆರ್ಥಿಕ ನಷ್ಟ =			**205.87**

ಇ) ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಯುಕ್ತರುಗಳ ವಿವರವನ್ನು ಒದಗಿಸುವುದು:

ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಯುಕ್ತರುಗಳ ವಿವರಗಳು ಕೆಳಕಂಡಂತೆ ಇವೆ.

ಕ್ರ. ಸಂ.	ಆಯುಕ್ತರವರ ಹೆಸರು	ಅವಧಿ
1	ಶ್ರೀಮತಿ ಲಕ್ಷ್ಮೀ ವೆಂಕಟಾಚಲಂ, ಭಾ.ಆ.ಸೇ	19-06-1995 ರಿಂದ 25-10-1999
2	ಶ್ರೀ ಜಯಕರ್ ಜೆರೋಮ್, ಭಾ.ಆ.ಸೇ	25-10-1999 ರಿಂದ 05-07-2004
3	ಶ್ರೀ ಎ.ಕೆ.ಅಗರವಾಲ್, ಭಾ.ಆ.ಸೇ (ಪ್ರಭಾರ)	05-07-2004 ರಿಂದ 12-07-2004
4	ಶ್ರೀ ಎಂ.ಎನ್.ವಿದ್ಯಾಶಂಕರ್, ಭಾ.ಆ.ಸೇ	12-07-2004 ರಿಂದ 05-05-2006
5	ಶ್ರೀ ಎಂ.ಕೆ.ಶಂಕರಲಿಂಗೇ ಗೌಡ, ಭಾ.ಆ.ಸೇ	05-05-2006 ರಿಂದ 17-03-2008
6	ಶ್ರೀ ಸಿದ್ದಯ್ಯ, ಭಾ.ಆ.ಸೇ	17-03-2008 ರಿಂದ 01-07-2010
7	ಶ್ರೀ ಭರತ್‌ಲಾಲ್ ಮೀನಾ, ಭಾ.ಆ.ಸೇ	01-07-2010 ರಿಂದ 04-06-2012
8	ಶ್ರೀ ಪ್ರದೀಪ್ ಸಿಂಗ್ ಖರೋಲ, ಭಾ.ಆ.ಸೇ	04-06-2012 ರಿಂದ 29-08-2012
9	ಶ್ರೀ ಶ್ಯಾಮ್‌ಭಟ್, ಭಾ.ಆ.ಸೇ	29-08-2012 ರಿಂದ 22.06.2016

ಈ)	ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದರಿಂದ ಸರ್ಕಾರಕ್ಕಾದ ನಷ್ಟವನ್ನು ಭರಿಸಲು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು:	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಣವನ್ನು ಮ್ಯೂಚ್ಯುಯಲ್ ಫಂಡ್‌ಗಳಲ್ಲಿ ಅನಧಿಕೃತವಾಗಿ ಹೂಡಿಕೆ ಮಾಡಿರುವ ಆರ್ಥಿಕ ಸದಸ್ಯರುಗಳು ಮತ್ತು ಎರಡನೇ ದರ್ಜೆ ಗುಮಾಸ್ತರಾದ ಶ್ರೀ ವಸಂತಕುಮಾರ್ ರವರ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆದ ನಷ್ಟವನ್ನು ಭರಿಸಲು ಕೈಗೊಂಡ ಕ್ರಮಗಳು: ಮಹಾಲೇಖಪಾಲರು ಕರ್ನಾಟಕರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಬರೆದ ಪತ್ರ ದಿನಾಂಕ:11-7-2014 ಸ್ವೀಕೃತವಾದೊಡನೆ ಬ್ಯಾಂಕ್ ಶಿಲ್ಕುಗಳನ್ನು ಮರುಹೊಂದಾಣಿಕೆ ಮಾಡುವುದಕ್ಕೆ ಕರ್ನಾಟಕ ಸಾರ್ವಜನಿಕ ಲೆಕ್ಕಪರಿಶೋಧಕರ ಸಂಸ್ಥೆಯನ್ನು (ಕೆಐಪಿಎ) ನಿಯೋಜಿಸಲು ಆಯುಕ್ತರು ಕ್ರಮ ಕೈಗೊಂಡರು. ಕೆಐಪಿಎ ಪ್ರಾಧಿಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಹಿಂದಿನ ಹಣಕಾಸು ಸದಸ್ಯರುಗಳು ಆಯುಕ್ತರ ಅನುಮತಿಯಿಲ್ಲದೇ ಬ್ಯಾಂಕ್ ಖಾತೆಗಳನ್ನು ತೆರೆದಿದ್ದರು ಮತ್ತು ಈ ಖಾತೆಗಳ ಮೂಲಕ ಮ್ಯೂಚ್ಯುಯಲ್ ಫಂಡ್‌ಗಳಲ್ಲ ಹೂಡಿಕೆ ಮಾಡಲು ಪ್ರಾಧಿಕಾರದ ಹಣವನ್ನು ಮಾರ್ಗಪಲ್ಲಟ ಮಾಡಿದರು ಎಂದು ತಿಳಿಸಿದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ವಿಷಯವನ್ನು ಸರ್ಕಾರಕ್ಕೆ ತಿಳಿಸುವ ಮತ್ತು ಪ್ರಧಾನ ಮಹಾಲೇಖಪಾಲರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸುವ ಹಾಗೂ ಸಮಾನಾಂತರವಾಗಿ ರಾಜ್ಯ ಅಪರಾಧ ತನಿಖಾ ಇಲಾಖೆಯಿಂದ ತನಿಖೆ ನಡೆಸುವ ಕ್ರಮಗಳನ್ನು ತೆಗೆದುಕೊಂಡಿತ್ತು. ಸರ್ಕಾರದ ನಿರ್ದೇಶನದ ಆಧಾರದ ಮೇಲೆ ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿಯನ್ನು (ಎಫ್‌ಐಆರ್) ದಾಖಲಿಸಲಾಯಿತು. ನಂತರ ರಾಜ್ಯ ಸರ್ಕಾರವು 1999-2014 ರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಣವನ್ನು ಮ್ಯೂಚುಯಲ್ ಫಂಡ್‌ಗಳಲ್ಲಿ ಮಾಡಿರುವ ಹೂಡಿಕೆಗಳನ್ನು ವಿಶೇಷ ಲೆಕ್ಕಪರಿಶೋಧನೆ ಮಾಡಲು ಪ್ರಧಾನ ಮಹಾಲೇಖಪಾಲರು (ಜಿ-ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು ಇವರನ್ನು ನವೆಂಬರ್ 2014 ರಲ್ಲಿ ಕೋರಲಾಗಿತ್ತು. ರಾಜ್ಯ ಅಪರಾಧ ತನಿಖಾ ಇಲಾಖೆಯಿಂದ (ಸಿಐಡಿ) ಸಮಾನಂತರವಾಗಿ ಅಪರಾಧ ತನಿಖೆಯನ್ನು ನಡೆಸಲು ಕೂಡ ರಾಜ್ಯ ಸರ್ಕಾರವು ಡಿಸೆಂಬರ್ 2014 ರಲ್ಲಿ ಆದೇಶಿಸಿತು. ಪ್ರಧಾನ ಮಹಾಲೇಖಪಾಲರು (ಜಿ-ಎಸ್‌ಎಸ್‌ಎ), ಕರ್ನಾಟಕ ಬೆಂಗಳೂರು ಇವರ ವಿಶೇಷ ಲೆಕ್ಕಪರಿಶೋಧನಾ ವರದಿಗೆ ಉತ್ತರಗಳನ್ನು ಸರ್ಕಾರಕ್ಕೆ / ಪ್ರಧಾನ ಮಹಾಲೇಖಪಾಲರಿಗೆ ದಿನಾಂಕ: 31-12-2015 ರಂದು ಸಲ್ಲಿಸಲಾಗಿದೆ. **<u>ಈ ಪ್ರಕರಣದಿಂದ ಆಗಿರುವ ನಷ್ಟಕ್ಕೆ ಜವಾಬ್ದಾರರಾಗಿರುವ ಅಧಿಕಾರಿ / ನೌಕರರುಗಳ ಮೇಲೆ ತೆಗೆದುಕೊಂಡಿರುವ ಕ್ರಮ:-</u>** ಈ ಅನಧಿಕೃತ ಫಂಡ್ ವರ್ಗಾವಣೆ ಪ್ರಕರಣ ಬೆಳಕಿಗೆ ಬಂದ ತಕ್ಷಣ ಪ್ರಾಧಿಕಾರದ ನಗದು ಗುಮಾಸ್ತರಾದ ಶ್ರೀ ವಸಂತಕುಮಾರ್ ರವರನ್ನು ಅಮಾನತ್ತಿನಲ್ಲಿರಿಸಲಾಗಿದ್ದು, ಈ ಅಮಾನತ್ತು ದಿನಾಂಕ: 31-7-2019 ರವರೆಗೆ ಮುಂದುವರೆದಿದ್ದು, ದಿನಾಂಕ: 31-7-2019 ರಂದು ಶ್ರೀ ವಸಂತಕುಮಾರ್‌ರವರು ಸೇವಾ ನಿವೃತ್ತರಾಗಿರುತ್ತಾರೆ. ಶ್ರೀ ವಸಂತಕುಮಾರ್ ರವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮವಹಿಸಲಾಗಿದೆ. ಈ ಪ್ರಕರಣಕ್ಕೆ ಕಾರಣಕರ್ತೃಗಳಾದ ಮೂವರು ಆರ್ಥಿಕ ಸದಸ್ಯರುಗಳಲ್ಲಿ ಶ್ರೀ ಎಂ.ಎನ್.ಶೇಷಪ್ಪ ಮತ್ತು ಶ್ರೀ ಬಿ.ಗಂಗಣ್ಣ ರವರು ಸೇವೆಯಿಂದ ವಯೋನಿವೃತ್ತರಾಗಿರುತ್ತಾರೆ. ಉಳಿದ ಒಬ್ಬ ಆರ್ಥಿಕ ಸದಸ್ಯರಾದ ಶ್ರೀ ಸಂದೀಪ್ ದಾಶ್‌ರವರು ಭಾರತೀಯ ಲೆಕ್ಕ ಸೇವೆಗೆ (ಐ.ಸಿ.ಎ.ಎಸ್) ಸೇರಿದವರಾಗಿರುತ್ತಾರೆ. ಇವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆ. ಈ ಪ್ರಕರಣದ ಹಿನ್ನಲೆಯಲ್ಲಿ ರಾಜ್ಯ ಸಿ.ಐ.ಡಿ ರವರು ಎಲ್ಲಾ ಮೂವರು ಆರ್ಥಿಕ ಸದಸ್ಯರುಗಳನ್ನು ಹಾಗೂ ಪ್ರಾಧಿಕಾರದ ನಗದು ಗುಮಾಸ್ತ ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ವ್ಯವಸ್ಥಾಪಕರನ್ನೊಳಗೊಂಡಂತೆ ಎಲ್ಲರನ್ನೂ ದಸ್ತಗಿರಿ

ಮಾಡಿರುತ್ತಾರೆ. ದಸ್ತಗಿರಿಯಾದ ಈ ಎಲ್ಲರೂ ಜಾಮೀನಿನ ಮೇಲೆ ಹೊರಬಂದಿರುತ್ತಾರೆ. ರಾಜ್ಯ ಸಿ.ಐ.ಡಿ ಯು ಎಲ್ಲಾ ಆರೋಪಿಗಳ ಮೇಲೆ ಆಪಾದನೆ ಪಟ್ಟಿಯನ್ನು ಸಲ್ಲಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾರ್ಜ್ ಶೀಟ್‌ನ್ನು ಸಿ.ಐ.ಡಿ ರವರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ದಾವೆ ಸಂಖ್ಯೆ.ಎಸ್.ಪಿ.ಎಲ್.ಸಿ/0000628/2017. ದಾವೆಯು ಪ್ರಗತಿಯಲ್ಲಿರುತ್ತದೆ.

ಪ್ರಾಧಿಕಾರವು ಸಹ ಈ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆಪಾದಿತರ ಮೇಲೆ ಸಿವಿಲ್ ಸೂಟ್ ದಾಖಲಿಸಿ, ಪ್ರಾಧಿಕಾರಕ್ಕೆ ಆಗಿರುವ ನಷ್ಟವನ್ನು ತುಂಬಿಕೊಳ್ಳುವ ಕ್ರಮ ಜರುಗಿಸಲಾಗಿರುತ್ತದೆ. ಓ.ಎಸ್. 1570/17 ರಲ್ಲಿ ಮಾನ್ಯ Court of the City Civil Judge at Bangalore ರಲ್ಲಿ ಕೆಳಕಂಡ ಅಧಿಕಾರಿಗಳ ವಿರುದ್ಧ ದಾವೆ ಹೂಡಲಾಗಿದೆ.

ಕ್ರ.ಸಂ.	ಹೆಸರು
1	ಶ್ರೀ ಸಂದೀಪ್ ದಾಶ್
2	ಶ್ರೀ ಎಮ್.ಎನ್.ಶೇಷಪ್ಪ
3	ಶ್ರೀ ಬಿ.ಗಂಗಣ್ಣ
4	ಶ್ರೀ ವಸಂತಕುಮಾರ್,
5	ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಕೆ.ಪಿ.ವೆಸ್ಟ್ ಬ್ರಾಂಚ್
6	ಕಾರ್ಪೋರೇಷನ್ ಬ್ಯಾಂಕ್, ಕೆ.ಪಿ.ವೆಸ್ಟ್ ಬ್ರಾಂಚ್
7	Karnataka Backward classes department building construction society
8	ಶ್ರೀಮತಿ ಶಾರದಾ ಸುಬ್ರಮಣ್ಯಂ
9	ಕಾಫಿಬೋರ್ಡ್ ಕರ್ನಾಟಕ
10	ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್ ಲಿ

ಪ್ರಕರಣವು ನ್ಯಾಯಾಲಯದಲ್ಲಿ ಪ್ರಗತಿಯಲ್ಲಿರುತ್ತದೆ.

<u>ಪ್ರಾಧಿಕಾರದ ನಿಧಿಯು ಇತರೆ ಸಂಸ್ಥೆಗಳಿಗೆ ವರ್ಗಾವಣೆ ಮಾಡಿರುವುದು:-</u>

(ರೂ.ಕೋಟಿಗಳಲ್ಲಿ)

ಸಂಸ್ಥೆಯ ಹೆಸರು	ವರ್ಗಾವಣೆ ಮಾಡಿದ ಮೊತ್ತ	ಜುಲೈ 2015 ರವರೆಗೆ ಬಡ್ಡಿ	ವರ್ಗಾವಣೆ ಮಾಡಿದ ದಿನಾಂಕ
ಕಾಫಿಬೋರ್ಡ್, ಕರ್ನಾಟಕ	1.04	1.68	25-11-2002
ಬಿಸಿಎಂ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಸೊಸೈಟಿ	2.13	2.54	26-06-2006 ಮತ್ತು 30-06-2006
ಬೆಂಗಳೂರು ಮೆಟ್ರೋ	3.00	3.07	14-06-2007
ಒಟ್ಟು =	**6.17**	**7.29**	

ಅನಧಿಕೃತವಾಗಿ ನಿಧಿ ವರ್ಗಾಯಿಸಲಾಗಿರುವ ಮೇಲ್ಕಂಡ ಸಂಸ್ಥೆಗಳೊಂದಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಅನಧಿಕೃತವಾಗಿ ವರ್ಗಾವಣೆಯಾಗಿರುವ ನಿಧಿಯನ್ನು ಬಡ್ಡಿ ಸಮೇತವಾಗಿ ಪ್ರಾಧಿಕಾರಕ್ಕೆ ಹಿಂದಿರುಗಿಸಲು ಕೋರಲಾಗಿರುತ್ತದೆ.

ಸಂಖ್ಯೆ: ನಅಇ 49 ಬೆಂಆಸೇ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು